ದಿನಾಂಕ 19-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಅರ್ಜಿದಾರರ ಪರವಾಗಿ ಶ್ರೀ ಆರ್.ಬಿ.ಕೆ ವಕೀಲರಿಂದಃ</u>**

1. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅರ್ಜಿದಾರಳು ಎದುರುಗಾರನನ್ನು ಮದುವೆ ಆದ ನಂತರ ಆತನ ಮನೆಗೆ ಬಂದು ಕೇವಲ 8 ದಿನಗಳವರೆಗೆ ಮಾತ್ರ ಸಾಂಸಾರಿಕ ಜೀವನವನ್ನು ಮಾಡಿರುತ್ತಾಳೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ಸದರಿ ಸಮಯದಲ್ಲಿ ಎದುರುಗಾರರ ಕುಟುಂಬದ ಕಟ್ಟು ಪಾಡುಗಳನ್ನು ಸರಿಯಾಗಿ ಪಾಲಿಸದೇ, ಆತನ ತಂದೆ ತಾಯಿಗೆ ಅಗೌರವದಿಂದ ನಡೆದುಕೊಂಡಿರುತ್ತಾಳೆಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ಎದುರುಗಾರನಿಗೆ ಮತ್ತು ಆತನ ಪೋಷಕರಿಗೆ ಯಾವುದೇ ಮಾಹಿತಿಯನ್ನು ನೀಡದೇ ತವರು ಮನೆಗೆ ಬಂದಿರುತ್ತಾಳೆಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುಗಾರನೇ ಅರ್ಜಿದಾರಳನ್ನು ತವರು ಮನೆಗೆ ಸ್ವತಃ ಬಿಟ್ಟು ಬಂದಿರುತ್ತಾನೆ ಎಂದರೆ ಸರಿಯಲ್ಲ.

2. ಅರ್ಜಿದಾರಳು ಮತ್ತು ಎದುರುಗಾರರ ಸಾಂಸಾರಿಕ ಜೀವನ ಸರಿಪಡಿಸಲು ಅರ್ಜಿದಾರರ ಕಡೆಯಿಂದ ಸುಮಾರು 20 ಜನ ಹಿರಿಯರು ಮತ್ತು ಎದುರುಗಾರರ ಕಡೆಯಿಂದ 20 ಜನ ಹಿರಿಯರು ಪಂಚಾಯಿತಿ ಸೇರಿದ್ದರು. ಪಂಚಾಯಿತಿಯಲ್ಲಿ ಸೇರಿದ್ದ ಎರಡೂ ಕಡೆಯ ಹಿರಿಯರ ಹೆಸರು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅರ್ಜಿದಾರಳೇ ಎದುರುಗಾರನೊಂದಿಗೆ ಸಾಂಸಾರಿಕ ಜೀವನವನ್ನು ಮಾಡಲು ಇಷ್ಟ ಇರಲಿಲ್ಲ ಎಂದು ಸುಳ್ಳು ಸಂಗತಿಗಳನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುಗಾರನೇ ಅರ್ಜಿದಾರಳೊಂದಿಗೆ ಜೀವನ ಮಾಡಲು ಇಷ್ಟ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

3. ಎದುರುಗಾರನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಹಾಗೂ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಪಿರ್ಯಾದನ್ನು ದಾಖಲಿಸಿದ್ದನು. ಸದರಿ ಪಿರ್ಯಾದನ್ನು ದಾಖಲಿಸಲು ನಾನು ಸಹ ಎದುರುಗಾರನೊಂದಿಗೆ ಹೋಗಿದ್ದೆ. ನಾನು ಎದುರುಗಾರನೊಂದಿಗೆ ಪಿರ್ಯಾದನ್ನು ದಾಖಲಿಸಲು ಹೋಗಿದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುಗಾರನು ಅರ್ಜಿದಾರಳ ವಿರುದ್ಧ ಶಿಕಾರಿಪುರದ ನ್ಯಾಯಾಲಯದಲ್ಲಿಯೂ ಪ್ರಕರಣವನ್ನು ದಾಖಲಿಸಿದ್ದಾನೆ. ಆ ಪ್ರಕರಣವನ್ನು ಯಾವ ಕಾರಣಕ್ಕೆ ಮತ್ತು ಯಾವ ಪರಿಹಾರ ಕೋರಿ ದಾಖಲಿಸಿದ್ದಾನೆ ಮತ್ತು ಸದರಿ ಪ್ರಕರಣದಲ್ಲಿ ಯಾವ ಆದೇಶ ಆಗಿರುತ್ತದೆ ಎಂದು ಗೊತ್ತಿಲ್ಲ.

4. ಮುಖ್ಯ ವಿಚಾರಣಾ ಪ್ರಮಾಣ ಪತ್ರದ 6 ನೇ ಪ್ಯಾರಾದಲ್ಲಿ ನಮೂದಿಸಿದ ಸಂಗತಿಗಳೆಲ್ಲವೂ ಸಂಪೂರ್ಣ ಕಟ್ಟುಕಥೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಎದುರುಗಾರನ ಮಾತಿನಂತೆ ಆತನಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ